ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

**ಸಂ:** ಸಿಬ್ಬಂದಿ-3/3ಎ/ಸಿಆರ್-03/2017-18

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ,
ಗಾಂಧಿನಗರ, ಬೆಂಗಳೂರು,
ದಿನಾಂಕ:01-02-2018.

## ಅಧಿಸೂಚನೆ

ಕರ್ನಾಟಕ ಗೆಜೆಟೆಡ್ ಪ್ರೊಬೆಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997 ರಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಒಟ್ಟು 58 (ಉಳಿದ ಮೂಲ ವೃಂದ 45 + ರಾಜ್ಯವ್ಯಾಪಿ ಸ್ಥಳೀಯ ವೃಂದ 13) ವಾಣಿಜ್ಯ ತೆರಿಗೆಗಳ ಇಲಾಖೆಯ ಗ್ರೂಪ್ 'ಬಿ' ವೃಂದದ ವಾಣಿಜ್ಯ ತೆರಿಗೆ ಅಧಿಕಾರಿ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಆಯ್ಕೆ ಪಟ್ಟಿಯನ್ನು ಅಧಿಸೂಚನೆ ಸಂಖ್ಯೆ:ಇ(1)574/2017-18 ಪಿಎಸ್‌ಸಿ, ದಿನಾಂಕ:30-06-2017 ರಲ್ಲಿ ಹೊರಡಿಸಿ, ದಿನಾಂಕ:13-07-2017 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದೆ. ಈ ಆಯ್ಕೆ ಪಟ್ಟಿಯನ್ವಯ ಕೆಳಕಂಡ ಅಭ್ಯರ್ಥಿಗಳನ್ನು ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ " ರೂ.22800-600-24600-700-28800-800-33600-900-39000-1050-43200 "ರ ವೇತನ ಶ್ರೇಣಿಯ ವಾಣಿಜ್ಯ ತೆರಿಗೆ ಅಧಿಕಾರಿ ಹುದ್ದೆಗೆ **ಪರಿವೀಕ್ಷಣೆ ಮೇಲೆ** (On Probation) ನೇಮಕ ಮಾಡಲಾಗಿದೆ.

| ಕ್ರ. ಸಂ. | ಆಯ್ಕೆ ಪಟ್ಟಿಯಲ್ಲಿನ ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ | ಆಯ್ಕೆಯಾಗಿರುವ ಮೀಸಲಾತಿ/ವರ್ಗೀಕರಣ |
|---|---|---|---|
| ಉಳಿದ ಮೂಲ ವೃಂದ:- | | | |
| 1 | 10 | ರವಿ ಸಂಕನಗೌಡ್ ಎಸ್.,<br>ಬಿನ್ ಶ್ರೀಮಂತ್ ಸಂಕನಗೌಡ್<br>ವಾಸ: ಶಿರಗುಪ್ಪಿ, ತಾ:ಜಮಖಂಡಿ,<br>ಬಾಗಲಕೋಟೆ ಜಿಲ್ಲೆ- 587119 | ಸಾ.ಅ./3ಬಿ/ಗ್ರಾ.ಅ. |
| 2 | 25 | ಶಿವಕುಮಾರ್ ಬಿ.ಇ.,<br>ಬಿಸಲಹಳ್ಳಿ ಗ್ರಾಮ, ಹಂದ್ರಂಗಿ ಅಂಚೆ,<br>ಕೋಣನೂರು ಹೋಬಳಿ,<br>ಅರಕಲಗೂಡು ತಾಲ್ಲೂಕು,<br>ಹಾಸನ -573130 | 3ಬಿ/ಗ್ರಾ.ಅ. |
| 3 | 33 | ಶ್ರೀನಿವಾಸ ಹೆಚ್ ಎನ್<br>ಬಿನ್ ನಾರಾಯಣ ಹೆಚ್ ಎನ್<br>ಹೊಗಳಗೆರೆ, ಶ್ರೀನಿವಾಸಪುರ ತಾಲ್ಲೂಕು,<br>ಕೋಲಾರ ಜಿಲ್ಲೆ-563138. | ಪ.ಜಾ/ಗ್ರಾ.ಅ |
| ರಾಜ್ಯವ್ಯಾಪಿ ಸ್ಥಳೀಯ ವೃಂದ (ಹೈದರಾಬಾದ್-ಕರ್ನಾಟಕ) | | | |
| 4 | 11 | ಗರ್ಜಿ ಲಿಂಗಪ್ಪ,<br>ಬಿನ್ ಹರಿವನದ ವೀರಣ್ಣ,<br>ಸಿರಿಗೇರಿ ಅಂಚೆ,<br>ಶಿರಗುಪ್ಪಾ ತಾಲ್ಲೂಕು- 583120 | ಪ.ಪಂ. |

## ನೇಮಕಾತಿ ಷರತ್ತು ಮತ್ತು ನಿಬಂಧನೆಗಳು

1. ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997 ರ ನಿಯಮ 11 (3) ರನ್ವಯ ಆಯ್ಕೆಯಾದ ಅಭ್ಯರ್ಥಿಗಳ ಜ್ಯೇಷ್ಠತೆಯು ಆಯ್ಕೆ ಪಟ್ಟಿಯಲ್ಲಿರುವ ಜ್ಯೇಷ್ಠತೆಯಂತೆ ಇರುತ್ತದೆ.

2. ಆಯ್ಕೆ ಪಟ್ಟಿಯಲ್ಲಿರುವ ಮೇಲ್ಕಂಡ ಅಭ್ಯರ್ಥಿಗಳ ನೇಮಕಾತಿಯು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿನ ರಿಟ್ ಅರ್ಜಿ ಸಂಖ್ಯೆ:202671-673/2015 ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿನ ಅರ್ಜಿ ಸಂಖ್ಯೆ 5553-56/2015, 2351/2017 ಮತ್ತು 2819/2017 ರಲ್ಲಿನ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ. ಸದರಿ ಪ್ರಕರಣಗಳನ್ನು ಹೊರತುಪಡಿಸಿ ಈ ವಿಷಯದ ಬಗ್ಗೆ ಮುಂದೆ ನ್ಯಾಯಾಲಯಗಳು ನೀಡಬಹುದಾದ ಆದೇಶ/ತೀರ್ಪಿಗೆ ಒಳಪಡುತ್ತದೆ.

3. ಸದರಿ ನೇಮಕಾತಿಯು ತಾತ್ಕಾಲಿಕವಾಗಿದ್ದು, ಈ ಎಲ್ಲಾ ಅಭ್ಯರ್ಥಿಗಳು ಎರಡು ವರ್ಷಗಳ ಅವಧಿಯಲ್ಲಿ ಪರೀಕ್ಷಾರ್ಥ ತರಬೇತಿಯಲ್ಲಿರುತ್ತಾರೆ. ಈ ಅವಧಿಯಲ್ಲಿ 1974 ರ ಕರ್ನಾಟಕ ನಾಗರಿಕ ಸೇವೆಗಳು (ಸೇವಾ ಮತ್ತು ಕನ್ನಡ ಭಾಷೆ ಪರೀಕ್ಷೆಗಳು) ನಿಯಮಾವಳಿಯಲ್ಲಿ ನಿಗದಿಪಡಿಸಿರುವ ಕನ್ನಡ ಪರೀಕ್ಷೆ ಹಾಗೂ ವಾಣಿಜ್ಯ ತೆರಿಗೆ ಅಧಿಕಾರಿ ಹುದ್ದೆಗೆ ನಿಗದಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು ಮತ್ತು ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸಬೇಕು.

4. ಈ ನೇಮಕಾತಿಯು ಅಭ್ಯರ್ಥಿಗಳ ಜನ್ಮ ದಿನಾಂಕಕ್ಕೆ ಸಂಬಂಧಿಸಿದ ಹಾಗೂ ಪದವಿಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಪದವಿ ಪ್ರಮಾಣ ಪತ್ರ ಹಾಗೂ ಎಸ್.ಎಸ್.ಎಲ್.ಸಿ./ತತ್ಸಮಾನ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಂದ ದೃಢೀಕರಿಸಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

5. ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ರಲ್ಲಿನ ನಿಯಮ 28 ರ ರೀತ್ಯಾ ಬಹುಪತ್ನಿತ್ವ/ಪತಿತ್ವ ಹೊಂದಿಲ್ಲದಿರುವ ಬಗ್ಗೆ ಸ್ವಯಂ ಘೋಷಣೆ ಮಾಡಿ, ಈ ಬಗ್ಗೆ ಪ್ರಮಾಣ ಪತ್ರವನ್ನು ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಸಲ್ಲಿಸತಕ್ಕದ್ದು.

6. ಇತ್ತೀಚಿನ ಎರಡು ಪಾಸ್ ಪೋರ್ಟ್ ಅಳತೆ ಭಾವ ಚಿತ್ರಗಳು ಮತ್ತು ವಿವಾಹಿತರಾಗಿದ್ದಲ್ಲಿ ಪತಿಪತ್ನಿಯ ಜಂಟಿ ಭಾವಚಿತ್ರವನ್ನು (ಸ್ಟುಡಿಯೋದಲ್ಲಿ ತೆಗೆಸಿರುವ) ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು.

7. ಅಭ್ಯರ್ಥಿಯು ಸೇವೆಗೆ ಹಾಜರಾಗಿ ಭಾರತ ಸಂವಿಧಾನದ ರೀತ್ಯಾ "ನಿಷ್ಠೆಯ ಪ್ರಮಾಣ ವಚನ/ಸೇವಾ ಪ್ರತಿಜ್ಞಾ ವಿಧಿ ಸ್ವೀಕರಿಸುವುದು".

8. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ವಿಶೇಷ) 04 ಪಿಇಟಿ 2005 ದಿನಾಂಕ:31-03-2006 ರನ್ವಯ ಅಭ್ಯರ್ಥಿಯು ಹೊಸ ನಿವೃತ್ತಿ ವೇತನ ಯೋಜನೆಗೆ (ಎನ್.ಪಿ.ಎಸ್) ಒಳಪಟ್ಟಿರುತ್ತಾರೆ.

9. ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಿದ ಬಗ್ಗೆ, ಇಲಾಖಾಧಿಕಾರಿಗಳು ನೀಡಿರುವ ನಿರಾಕ್ಷೇಪಣಾ ಪತ್ರ, ಯಾವುದೇ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಬಾಕಿಯಿಲ್ಲದಿರುವ / ಹೂಡಲು ಉದ್ದೇಶಿಸದಿರುವ ಬಗ್ಗೆ ಮತ್ತು ಇಲಾಖೆಯಿಂದ

ಬಿಡುಗಡೆಯಾಗಿರುವ ಬಗ್ಗೆ ನಿಯಮಾವಳಿಗಳನ್ನು ಉಲ್ಲಂಘಿಸಿ ಸಲ್ಲಿಸಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

10. ಈ ಅಭ್ಯರ್ಥಿಗಳು ಸಲ್ಲಿಸಿರುವ ವಿದ್ಯಾರ್ಹತೆ / ಜನ್ಮ ದಿನಾಂಕಗಳ ಮೂಲ ಪ್ರಮಾಣ ಪತ್ರಗಳು ಸರಿ ಇವೆ ಎಂದು ಅಭ್ಯರ್ಥಿಗಳಿಂದ ಶಪಥಪತ್ರ (Affidavit) ಕರ್ತವ್ಯಕ್ಕೆ ಹಾಜರಾಗುವಾಗ ನಿಗದಿತ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

11. ಆಯ್ಕೆಯಾಗಿರುವ ಒಟ್ಟು 58 ಅಭ್ಯರ್ಥಿಗಳ ಪೈಕಿ ಈಗಾಗಲೇ ನೇಮಕಾತಿ ಆದೇಶ ನೀಡಿರುವ 44 ಅಭ್ಯರ್ಥಿಗಳನ್ನು ಮತ್ತು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗದ 3 ಅಭ್ಯರ್ಥಿಗಳಾದ (1) ಧ್ಯಾನಚಂದ್ರ (ಕ್ರ.ಸಂ.5), (2) ಸುನೀಲ್ ಕುಮಾರ್ ಗೌಡ (ಕ್ರ.ಸಂ.1 ಹೈ.ಕ.) ಮತ್ತು (3) ಮಾಣಿಕ್‌ರಾಜ್ ಎಸ್ (ಕ್ರ.ಸಂ.10 ಹೈ.ಕ.) ಇವರುಗಳನ್ನು ಹೊರತುಪಡಿಸಿ ಉಳಿದ ಈ ಕೆಳಕಂಡ 7 ಅಭ್ಯರ್ಥಿಗಳಾದ

(1) ಮಹಾಲಕ್ಷ್ಮಿ ಡಿ.ಜಿ. (ಕ್ರ.ಸಂ.19)
(2) ಆಶಾ ಎಂ.ಎನ್, (ಕ್ರ.ಸಂ.38)
(3) ಕೆ.ಅಂಜುಮ್ ಹಫೀಸ್, (ಕ್ರ,ಸಂ.39)
(4) ಮಹಾಲಿಂಗ ಪೋಳ್, (ಕ್ರ.ಸಂ.40)
(5) ಜ್ಯೋತಿ ಚೌಧರಿ, (ಹೈ.ಕ. ಕ್ರ.ಸಂ.5)
(6) ಇ.ಎಸ್.ಮಾನಸ, (ಹೈ.ಕ. ಕ್ರ.ಸಂ.6) ಹಾಗೂ
(7) ಖಾಜಾ ಖಲೀಲುಲ್ಲಾ (ಹೈ.ಕ.ಕ್ರ.ಸಂ.7)

ಇವರುಗಳಿಗೆ ಸಂಬಂಧಿಸಿದಂತೆ ಕೆಲವೊಂದು ದಾಖಲಾತಿಗಳ ಪರಿಶೀಲನೆ ಪೂರ್ಣವಾಗಿಲ್ಲದ ಕಾರಣ ಸದರಿ ದಾಖಲಾತಿಗಳ ಪರಿಶೀಲನಾ ದೃಢೀಕರಣಗಳು ಸ್ವೀಕೃತವಾದ ನಂತರ ಇವರುಗಳ ಸಂಬಂಧ ನೇಮಕಾತಿ ಆದೇಶವನ್ನು ಹೊರಡಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಹಾಗೂ ಸದರಿಯವರುಗಳು ಅಂತಿಮ ಆಯ್ಕೆ ಪಟ್ಟಿಯಲ್ಲಿ ಹೊಂದಿರುವ ಜ್ಯೇಷ್ಠತೆಯನ್ನು ಕಾಪಾಡಲಾಗುವುದು.

12. ಸದರಿ ಅಭ್ಯರ್ಥಿಗಳ ನೇಮಕಾತಿಯು ಮತ್ತು ಸೇವಾ ಸೌಲಭ್ಯಗಳು ಅಗಿಂದಾಗ್ಗೆ ಜಾರಿಯಲ್ಲಿರುವ ಸರ್ಕಾರದ ನಿಯಮಗಳು / ಆದೇಶಗಳ ಅಧೀನಕ್ಕೆ ಒಳಪಟ್ಟಿರುತ್ತದೆ.

13. ಈ ಅಧಿಸೂಚನೆಯನ್ನು ನೋಂದಾಯಿತ ಅಂಚೆ ಮೂಲಕ ರವಾನಿಸಿದ್ದು ಅಭ್ಯರ್ಥಿಗಳು ನೇಮಕಾತಿ ಆದೇಶ ರವಾನಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ವಾಣಿಜ್ಯ ತೆರಿಗೆಗಳ ಆಯುಕ್ತರು, ವಾಣಿಜ್ಯ ತೆರಿಗೆಗಳ ಕಾರ್ಯಾಲಯ, ಗಾಂಧಿನಗರ, ಬೆಂಗಳೂರು ಇವರಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಈ ಅವಧಿಯೊಳಗೆ ಯಾವುದೇ ಅಭ್ಯರ್ಥಿಯು ಹಾಜರಾಗದಿದ್ದಲ್ಲಿ, ಅವರ ನೇಮಕಾತಿಯು ರದ್ದುಗೊಳ್ಳುತ್ತದೆ.

(ಶ್ರೀಕರ್ ಎಂ.ಎಸ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ) ಬೆಂಗಳೂರು.

ಶ್ರೀಕರ್. ಎಂ.ಎಸ್., ಭಾ.ಆ.ಸೇ.,
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

<u>ಇವರಿಗೆ,</u>

ಕರ್ನಾಟಕ ರಾಜ್ಯ ಪತ್ರ ಸಂಕಲನಕಾರರು, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಅದರ 100 ಪ್ರತಿಗಳನ್ನು ಆಯುಕ್ತರು, ವಾಣಿಜ್ಯ ತೆರಿಗೆಗಳ ಕಾರ್ಯಾಲಯ, ಗಾಂಧೀನಗರ, ಬೆಂಗಳೂರು ಇವರಿಗೆ ಕಳುಹಿಸಲು ಕೋರಿದೆ.

<u>ಪ್ರತಿ:</u>

1) ಮಹಾಲೇಖಪಾಲರು, (ಎ ಅಂಡ್ ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.

3) ಸರ್ಕಾರದ ಕಾರ್ಯದರ್ಶಿಗಳು, (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು) ವಿಧಾನಸೌಧ, ಬೆಂಗಳೂರು
5) ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು (ಪತ್ರದೊಂದಿಗೆ).
6) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
7) ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು.
8) ಸಂಬಂಧಿಸಿದ ಅಭ್ಯರ್ಥಿಗಳಿಗೆ (ನೋಂದಣಿ ಅಂಚೆ ಸ್ವೀಕೃತಿಯೊಂದಿಗೆ)
9) ರಕ್ಷಾ ಕಡತ / ಹೆಚ್ಚುವರಿ ಪ್ರತಿ.